**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ದಾಂಡೇಲಿ**

**ಸಿ.ಸಿ ನಂಃ 27/2018**

**ಪಿರ್ಯಾದಿದಾರರು : ಕರ್ನಾಟಕ ಸರ್ಕಾರದ ಪರವಾಗಿ**

**ವಲಯ ಅರಣ್ಯಾಧಿಕಾರಿ, ದಾಂಡೇಲಿ.**

-ವಿರುದ್ಧ-

**ಆರೋಪಿತರು : ಗುಂಡು ಕಲ್ಲಪ್ಪಾ ಗೌಂಡಳಕರ,**

ವಯಸ್ಸುಃ 60 ವರ್ಷ,

ಸಾಃ ಕೆರವಾಡ, ದಾಂಡೇಲಿ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ಸಿ.ಆರ್.ಪಿ.ಸಿ ಅಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಃ 1:** ನೀವು ಅಭಿಯೋಜನೆ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿದ್ದೀರಾ?

**ಉತ್ತರಃ**

**ಪ್ರಃ 2: ಪಿಡಬ್ಲ್ಯೂ 01/ಚಾಸಾ-1: ಶ್ರೀ ಅರುಣ ಪ್ರಕಾಶ ಜಾದವ** ಅವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಸಾಕ್ಷಿಯವರು ದಾಂಡೇಲಿ ವಲಯದಲ್ಲಿ ಅರಣಾ ರಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು, ದಿನಾಂಕಃ 20-03-2014 ರಂದು ಸಾಯಂಕಾಲ 6-00 ಗಂಟೆಗೆ ಆರೋಪಿತರಾದ ನಿಮ್ಮ ಮನೆಯಲ್ಲಿ ಸಾಗ ಹಾಗೂ ಸಿಸಂ ತುಂಡುಗಳನ್ನು ಇಟ್ಟಿರುವುದಾಗಿ ಖಚಿತ ಮಾಹಿತಿ ಬಂದ ಮೇರೆಗೆ ಸಾಕ್ಷಿಯವರು ಚಾಸಾ-4 ಮತ್ತು 5 ಹಾಗೂ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಆರೋಪಿತರಾದ ನಿಮ್ಮ ಮನೆಗೆ ಹೋಗಿ ತಪಾಸಣೆ ಮಾಡಿದಾಗ, ಮನೆಯ ಪಕ್ಕ ದನದ ಕೊಟ್ಟಿಗೆಯಲ್ಲಿ 01 ಸಾಗ ಚಾಕ ಹಾಗೂ 4 ಸಿಸಂ ಹಲಗೆಗಳು ಹಾಗೂ ಕಟ್ಟಿಗೆ ಕತ್ತರಿಸುವ ಅಡ್ಡ ಗರಗಸ ಮತ್ತು ಬಾಚಿ ಹಾಗೂ ಮತ್ತೊಂದು ಕೋಣೆಯಲ್ಲಿ 01 ಸಾಗ ಚೌಕ ನಗ ಇರುವುದು ಕಂಡು ಬಂದಿರುತ್ತದೆ ಎಂದು, ಈ ಬಗ್ಗೆ ಆರೋಪಿತರಾದ ನಿಮ್ಮನ್ನು ವಿಚಾರಿಸಿದಾಗ ಪಕ್ಕದ ಜಂಗಲ್‌ನಿಂದ ಅನಧೀಕೃತವಾಗಿ ತಂದು ಸಂಗ್ರಹಿಸಿರುವುದಾಗಿ ತಿಳಿಸಿದ್ದು, ಸದ್ರಿ ಮುದ್ದೆ ಮಾಲುಗಳನ್ನು ಪಂಚನಾಮೆಯ ಮೂಲಕ ವಶಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಃ 3: ಪ್ರಾ.ಸಾ.1** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ಮುದ್ದೆ ಮಾಲುಗಳನ್ನು, ಆರೋಪಿತರಾದ ನಿಮ್ಮನ್ನು ವಲಯ ಕಚೇರಿಗೆ ಕರೆದುಕೊಂಡು ಬಂದು ಆರೋಪಿರಾದ ನಿಮ್ಮ ವಿರುದ್ಧ ಪ್ರಕರಣ

ದಾಖಲಿಸಿ, ಮುಂದಿನ ತನಿಖೆಗಾಗಿ ಚಾಸಾ-5 ರವರಿಗೆ ಹಸ್ತಾಂತರಿಸಿದ್ದು, ಪ್ರ.ವ.ವರದಿಯಲ್ಲಿ ಸಾಕ್ಷಿಯವರು ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು, ಪಂಚನಾಮೆ ಕಾಲಕ್ಕೆ ತೆಗೆದ ಫೋಟೋವನ್ನು ನಿಪಿ-2 ಎಂದು, ಅದಕ್ಕೆ ಸಂಬಂಧಿಸಿದ 65 ಬಿ ದೃಡೀಕೃತ ಪತ್ರವನ್ನು ನಿಪಿ-2 ಎ ಎಂದು ಹಾಗೂ ಆರೋಪಿತರಾದ ನಿಮ್ಮನ್ನು ನೋಡಿ ಗುರುತಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಃ 4: ಪಿಡಬ್ಲ್ಯೂ 02/ಚಾಸಾ-6: ಮಹೇಶ ಚಂದ್ರಯ್ಯ ಹಿರೇಮಠ** ಅವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಸಾಕ್ಷಿಯವರು 2012 ರಿಂದ 2015 ರ ವರೆಗೆ ದಾಂಡೇಲಿ ವಲಯ ಕಚೇರಿಯಲ್ಲಿ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆಂದು, ದಿಃ 20-03-2014 ರಂದು ರಾತ್ರಿ 08-00 ಗಂಟೆಗೆ ಚಾಸಾ-4 ರವರು ಕೆರವಾಡ ಗ್ರಾಮದಲ್ಲಿ ಒಬ್ಬ ವ್ಯಕ್ತಿಯ ಮೇಲೆ ಅಂದರೆ ಆರೋಪಿತರಾದ ನಿಮ್ಮ ದಾಳಿ ಮಾಡಿ, ಸಾಕ್ಷಿಯವರಿಗೆ 2 ಸಾಗುವಾನಿ ನಗಗಳನ್ನು ಮತ್ತು 4 ಸಿಸಂನ ಹಲಗೆಗಳನ್ನು, ಒಂದು ಬಾಚಿ, ಒಂದು ಗರಗಸ, ಪ್ರ.ವ.ವರದಿ, ಸ್ಥಳ ಪಂಚನಾಮೆ ಮತ್ತು ಜಪ್ತು ಪಡಿಸಿದ ಸ್ವತ್ತಿನ ವರದಿಯನ್ನು ನೀಡಿ, ಸಾಕ್ಷಿಯ ಸಮಕ್ಷಮ ಆರೋಪಿತರಾದ ಗುಂಡು ಕಲ್ಲಪ್ಪ ಗೊಂಡಾಳಕರ ಆದ ನೀವು ಹಾಜರುಪಡಿಸಿದ್ದು, ನಂತರ ಸಾಕ್ಷಿಯು ಸದರಿ ದಾಖಲೆಗಳನ್ನು ಮತ್ತು ವಸ್ತುಗಳನ್ನು ಪಡೆದು, ಪರಿಶೀಲನೆ ಮಾಡಿದ್ದು ಮತ್ತು ಆರೋಪಿತರಾದ ನಿಮ್ಮ ವಿಚಾರಣೆಯನ್ನು ಮಾಡಿರುತ್ತೇನೆ ಎಂದು, ಆಗ ಆರೋಪಿರಾದ ನೀವು ಸದರಿ ಕಟ್ಟಿಗೆಗಳನ್ನು ಕಾಡಿನಿಂದ ತಂದಿರುವುದಾಗಿ ಒಪ್ಪಿಕೊಂಡು, ಸಾಕ್ಷಿಯವರ ಹತ್ತಿರ ಯಾವುದೇ ಪರವಾನಗಿ ಅಥವಾ ಅನುಮತಿ ಇಲ್ಲ ಎಂದು ತಿಳಿಸಿದ್ದು ಮತ್ತು ನಿಮ್ಮ ತಪ್ಪನ್ನು ಒಪ್ಪಿಕೊಂಡು ಹೇಳಿಕೆಯನ್ನು ನೀಡಿರುತ್ತಾರೆ ಎಂದು, ನಂತರ ಆರೋಪಿತರಾದ ನಿಮಗೆ ನೀವು ಮಾಡಿದ ಅಪರಾಧದ ಬಗ್ಗೆ ಮಾಹಿತಿಯನ್ನು ನೀಡಿ, ಸೂಕ್ತ ಬೆಂಗಾವಲಿನೊಂದಿಗೆ ಮಾನ್ನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು, ನಂತರ ಘಟನಾ ಸ್ಥಳಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪಡೆದುಕೊಂಡಿದ್ದು, ದಿಃ 24-03-2014 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ಮಾಡಿ, ಚಾಸಾ-1, 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಃ 5: ಪ್ರಾ.ಸಾ.02** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿತರಾದ ನಿಮ್ಮ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದ ಕಾರಣ, ಆರೋಪಿತರಾದ ನಿಮ್ಮ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು, ಸದರಿ ಕಟ್ಟಿಗೆಗಳು ಸಾಗುವಾನಿ ಮತ್ತು ಸಿಸಂ ಮರಗಳೇ ಎಂದು ಸಾಕ್ಷಿಯವರು ನ್ಯಾಯಾಲಯಕ್ಕೆ ಒಂದು ವರದಿಯನ್ನು ನೀಡಿದ್ದು, ಸದರಿ ವರದಿಯನ್ನು ಆರೋಪಿತರಾದ ನಿಮ್ಮ ಪರ ವಕೀಲರ ತಕರಾರಿನೊಂದಿಗೆ ನಿಪಿ-3 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, ಸಾಕ್ಷಿಯವರು ಗ್ರಾಮ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ಸಾಕ್ಷಿಯು ನಿಪಿ-2 ಫೋಟೋವನ್ನು ಮತ್ತು ಒಂದು ಸಿಡಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು ಹಾಗೂ ಆರೋತರಾದ ನಿಮ್ಮನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಃ 6: ಪಿಡಬ್ಲ್ಯೂ 03/ಚಾಸಾ-04: ಜೆ.ಎಸ್.ಡಿಸೋಜಾ** ಅವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಸಾಕ್ಷಿಯವರು 2013 ರಿಂದ 2017 ರ ವರೆಗೆ ದಾಂಡೇಲಿ ವಲಯ ಕಚೇರಿಯಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು, ದಿಃ 20-03-2014 ರಂದು ಸಂಜೆ ಸುಮಾರು 06-00 ಗಂಟೆ ಸಮಯದಲ್ಲಿ ಕೆರವಾಡ ಗ್ರಾಮದಲ್ಲಿ ಆರೋಪಿತರಾದ ಗುಂಡು ಕಲ್ಲಪ್ಪ ಗೊಂಡಾಳಕ ಆದ ನಿಮಗೆ ಸೇರಿದ ದನದ ಕೊಟ್ಟಿಗೆಯಲ್ಲಿ ಮಾಲು ಇದೆ ಎಂದು ಬಂದ ಬಾತ್ಮಿ ಮೇರೆಗೆ, ಸದರಿ ವಿಷಯವನ್ನು ಚಾಸಾ-6 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿ, ಅವರಿಂದ ಶೋಧನೆಗೆ ಮೌಖಿಕ ಅನುಮತಿಯನ್ನು ಪಡೆದು, ಸಾಕ್ಷಿ, ಚಾಸಾ-1 ಮತ್ತು 5 ರವರನ್ನು ಕರೆದುಕೊಂಡು ಕೆರವಾಡ ಗ್ರಾಮಕ್ಕೆ ಸಂಜೆ 06-30 ಕ್ಕೆ ತಲುಪಿ, ಅಲ್ಲಿ ಎರಡು ಜನ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದು, ಅವರಿಗೆ ಮಾಹಿತಿಯನ್ನು ತಿಳಿಸಿ, ಅವರನ್ನೂ ಸಹ ಸಾಕ್ಷಿಯವರ ಜೊತೆ ಕರೆದುಕೊಂಡು ಆರೋಪಿತರಾದ ನಿಮ್ಮ ಮನೆಗೆ ಹೋದೆವು ಎಂದು, ನಂತರ ಮನೆಯಲ್ಲಿದ್ದ ಎಲ್ಲಾ ಹೆಣ್ಣು ಮಕ್ಕಳಿಗೆ ಹೊರಬರಲು ಹೇಳಿ ಮತ್ತು ಹೊರಗೆ ಬಂದ ನಂತರ ಬಾತ್ಮಿ ವಿಚಾರವನ್ನು ತಿಳಿಸಿ, ಮನೆಯನ್ನು ಶೋಧಿಸುವ ಅವಶ್ಯಕತೆಯನ್ನು ತಿಳಿಸಿದ್ದು, ಅದರಂತೆ ಮನೆಯ ಪಕ್ಕದಲ್ಲಿರುವ ಕೊಟ್ಟಿಗೆಗೆ ಹೋದಾಗ, ಅಲ್ಲಿ ಹುಲ್ಲಿನ ಕೆಳಗೆ 4 ಸಿಸಂನ ಹಲಗೆಗಳು ಮತ್ತು ಒಂದು ಸಾಗುವಾನಿ ಮರದ ಚೌಕ ನಗ, 5 ಅಡಿಯ ಒಂದು ಗರಗಸ ಮತ್ತು ಒಂದ ಬಾಚಿ ಇದ್ದವು ಎಂದು, ಅದೇ ರೀತಿ ಅಲ್ಲೆ ಪಕ್ಕದಲ್ಲಿದ್ದ ಇನ್ನೊಂದು

ಕೋಣೆಯನ್ನು ಶೋಧಿಸಿದಾಗ, ಅಲ್ಲಿಯೂ ಒಂದು ಸಾಗುವಾನಿ ಮರದ ಚೌಕ ನಗ ಸಿಕ್ಕಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಃ 7: ಪ್ರಾ.ಸಾ.03** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ಎಲ್ಲಾ ಸ್ಥಳವನ್ನು ಪರಿಶೀಲನೆ ಮಾಡಿದಾಗ ಬೇರೆ ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ ಎಂದು, ಆಗ ಮನೆಯ ಮಾಲೀಕನಾದ ಆರೋಪಿತರಾದ ನಿಮಗೆ ಸದರಿ ಕಟ್ಟಿಗೆಗಳನ್ನು ಹೊಂದಲು ಅನುಮತಿ ಅಥವಾ ಪರವಾನಗಿ ಇರುವ ಬಗ್ಗೆ ವಿಚಾರಿಸಿದಾಗ, ಆರೋಪಿತರಾದ ನಿಮ್ಮ ಹತ್ತಿರ ಯಾವುದೇ ಅನುಮತಿ ಅಥವಾ ಪರವಾನಗಿ ಇರುವುದಿಲ್ಲ ಮತ್ತು ಸದರಿ ಕಟ್ಟಿಗೆಗಳನ್ನು ಪಕ್ಕದ ಕಾಡಿನಿಂದ ಕಡಿದುಕೊಂಡು ಬಂದಿರುವುದಾಗಿ ತಿಳಿಸಿದ್ದು, ನಂತರ ಸದರಿ ಎಲ್ಲಾ ವಸ್ತುಗಳನ್ನು ಕೊಟ್ಟಿಗೆಯ ಮುಂದೆ ಮನೆಯ ಮುಂದೆ ತಂದು ಇಟ್ಟು, ಅವುಗಳನ್ನು ಅಳತೆ ಮಾಡಿ, ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಆರೋಪಿತರಾದ ನಿಮ್ಮ ವಿರುದ್ಧ ಪ್ರ.ವ.ವರದಿಯನ್ನು ದಾಖಲಿಸಿ, ಎಲ್ಲಾ ವಸ್ತುಗಳನ್ನು ಜಪ್ತು ಮಾಡಿ, ಮುಂದಿನ ಕ್ರಮಕ್ಕಾಗಿ ವಲಯ ಕಚೇರಿಗೆ ತೆಗೆದುಕೊಂಡು ಬಂದಿದ್ದು ಮತ್ತು ಅದೇ ಸಮಯಲ್ಲಿ ಆರೋಪಿತರಾದ ನಿಮ್ಮನ್ನು ಸಹ ಕರೆದುಕೊಂಡು ಕಚೇರಿಗೆ ಹೋಗಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಃ 8: ಪ್ರಾ.ಸಾ.03** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ಆರೋಪಿತರಾದ ನಿಮ್ಮನ್ನು ಮತ್ತು ಜಪ್ತಾದ ವಸ್ತುಗಳನ್ನು, ನಿಮ್ಮ ಹೇಳಿಕೆಯನ್ನು, ಪಂಚನಾಮೆಯನ್ನು ಚಾಸಾ-6 ರವರಿಗೆ ಮುಂದಿನ ಕ್ರಮಕ್ಕಾಗಿ ಹಸ್ತಾಂತರಿಸಿರುತ್ತೇನೆ ಎಂದು, ನಂತರ ಚಾಸಾ-6 ರವರ ಆದೇಶದ ಮೇರೆಗೆ ಆರೋಪಿತರಾದ ನಿಮ್ಮನ್ನು ಸೂಕ್ತ ಬೆಂಗಾವಲಿನೊಂದಿಗೆ ಮಾನ್ನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು, ಮರುದಿನ ಚಾಸಾ-6 ರವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆಂದು, ಸಾಕ್ಷಿಯು ನಿಪಿ-2 ಫೋಟೋವನ್ನು ನೋಡಿ ಗುರುತಿಸಿದ್ದು ಹಾಗೂ ನ್ಯಾಯಾಲಯದಲ್ಲಿ ಆರೋಪಿತರಾದ ನಿಮ್ಮನ್ನು ನೋಡಿ ಗುರುತಿಸಿರುತ್ತಾರೆ ಎಂದು, ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು, ಸ್ವತ್ತು ಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು, ಸಾಕ್ಷಿಯು ನಿಪಿ-1 ನ್ನು

ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಃ 9: ಪಿಡಬ್ಲ್ಯೂ 04/ಚಾಸಾ-05: ಪ್ರಶಾಂತ ಶ್ರೀಕಾಂತ ಕ್ಷಿರಸಾಗರ** ಅವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಸಾಕ್ಷಿಯವರು ಡಿಸೆಂಬರ್-2012 ರಿಂದ ಅಗಸ್ಟ್-2017 ರವರೆಗೆ ದಾಂಡೇಲಿ ವಲಯದ ಕರೆಂಪಲ್ಲಿ ಗಸ್ತಿನಲ್ಲಿ ಗಸ್ತು ವನಪಾಲಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು, ದಿನಾಂಕಃ 20-03-2014 ರಂದು ಸಂಜೆ ಸುಮಾರು 6-00 ಗಂಟೆ ಸಮಯದಲ್ಲಿ ಕೆರವಾಡ ಗ್ರಾಮದಲ್ಲಿ ಆರೋಪಿತನಾದ ಗುಂಡು ಕಲ್ಲಪ್ಪ ಗೊಂಡಾಳಕ ರವರಿಗೆ ಸೇರಿದ ದನದ ಕೊಟ್ಟಿಗೆಯಲ್ಲಿ ಮಾಲು ಇದೆ ಎಂದು ಬಂದ ಬಾತ್ಮಿ ಮೇರೆಗೆ ಚಾಸಾ-1 ರವರು ಸದರಿ ವಿಷಯವನ್ನು ಚಾಸಾ-6 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿ, ಸಾಕ್ಷಿಯವರನ್ನು ಮತ್ತು ಚಾಸಾ-4 ರವರನ್ನು ಕರೆದುಕೊಂಡು, ಕೆರವಾಡ ಗ್ರಾಮಕ್ಕೆ ಸಂಜೆ 6-30 ಕ್ಕೆ ತಲುಪಿ, ಅಲ್ಲಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದು, ಅವರಿಗೆ ಮಾಹಿತಿಯನ್ನು ತಿಳಿಸಿ, ಪಂಚರಾಗಿ ಮಾಡಿಕೊಂಡು, ಅವರನ್ನು ಸಾಕ್ಷಿಯವರ ಜೊತೆ ಕರೆದುಕೊಂಡು ಆರೋಪಿತನಾದ ಗುಂಡು ಕಲ್ಲಪ್ಪ ಗೊಂಡಾಳಕರವರ ಮನೆಗೆ ಹೋದೆವು ಎಂದು, ನಂತರ ಮನೆಯಲ್ಲಿದ್ದ ಎಲ್ಲಾ ಹೆಣ್ಣು ಮಕ್ಕಳಿಗೆ ಹೊರ ಬರಲು ಹೇಳಿದ್ದು ಮತ್ತು ಹೊರಗೆ ಬಂದ ನಂತರ ಬಾತ್ಮಿ ವಿಚಾರವನ್ನು ತಿಳಿಸಿ, ಮನೆಯನ್ನು ಶೋಧಿಸುವ ಅವಶ್ಯಕತೆಯನ್ನು ತಿಳಿಸಿದೆವು ಎಂದು, ಅದರಂತೆ ಮನೆಯ ಪಕ್ಕದಲ್ಲಿರುವ ಕೊಟ್ಟಿಗೆಗೆ ಹೋದಾಗ, ಅಲ್ಲಿ ಹುಲ್ಲಿನ ಕೆಳಗೆ 4 ಸಿಸಂನ ಹಲಗೆಗಳು ಮತ್ತು ಒಂದು ಸಾಗುವಾನಿ ಮರದ ಚೌಕ ನಗ, 5 ಅಡಿಯ ಒಂದು ಗರಗಸ ಮತ್ತು ಒಂದ ಚಾಚಿ ಇದ್ದು, ಅದೇ ರೀತಿ ಅಲ್ಲೆ ಪಕ್ಕದಲ್ಲಿದ್ದ ಇನ್ನೊಂದು ಕೋಣೆಯನ್ನು ಶೋಧಿಸಿದಾಗ, ಅಲ್ಲಿಯೂ ಒಂದು ಸಾಗುವಾನಿ ಮರದ ಚೌಕ ನಗ ಸಿಕ್ಕಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಃ 10: ಪ್ರಾ.ಸಾ.04** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ಎಲ್ಲಾ ಸ್ಥಳವನ್ನು ಪರಿಶೀಲನೆ ಮಾಡಿದ್ದು, ಬೇರೆ ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ ಎಂದು, ಆಗ ಮನೆಯ ಮಾಲೀಕನಾದ ಆರೋಪಿಯನ್ನು ಚಾಸಾ-1 ರವರು ಸದರಿ ಕಟ್ಟಿಗೆಗಳನ್ನು ಹೊಂದಲು ಅನುಮತಿ ಅಥವಾ ಪರವಾನಗಿ ಇರುವ ಬಗ್ಗೆ ವಿಚಾರಿಸಿದಾಗ, ಆರೋಪಿತರಾದ ನಿಮ್ಮ ಹತ್ತಿರ ಯಾವುದೇ ಅನುಮತಿ ಅಥವಾ ಪರವಾನಗಿ ಇರುವುದಿಲ್ಲ ಮತ್ತು ಸದರಿ ಕಟ್ಟಿಗೆಗಳನ್ನು ಪಕ್ಕದ ಕಾಡಿನಿಂದ ಕಡಿದುಕೊಂಡು ಬಂದಿರುವುದಾಗಿ ತಿಳಿಸಿರುತ್ತಾನೆ ಎಂದು,

ನಂತರ ಸದರಿ ಎಲ್ಲಾ ವಸ್ತುಗಳನ್ನು ಕೊಟ್ಟಿಗೆಯ ಮುಂದೆ ಮನೆಯ ಮುಂದೆ ತಂದು ಇಟ್ಟು, ಅವುಗಳನ್ನು ಅಳತೆ ಮಾಡಿ, ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಆರೋಪಿತರಾದ ನಿಮ್ಮ ವಿರುದ್ಧ ಪ್ರ.ವ.ವರದಿಯನ್ನು ದಾಖಲಿಸಿ, ಎಲ್ಲಾ ವಸ್ತುಗಳನ್ನು ಜಪ್ತು ಮಾಡಿ, ಮುಂದಿನ ಕ್ರಮಕ್ಕಾಗಿ ವಲಯ ಕಚೇರಿಗೆ ತೆಗೆದುಕೊಂಡು ಬಂದಿರುತ್ತೇವೆ ಮತ್ತು ಅದೇ ಸಮಯದಲ್ಲಿ ಆರೋಪಿತರಾದ ನಿಮ್ಮನ್ನು ಸಹ ಕರೆದುಕೊಂಡು ಕಚೇರಿಗೆ ಹೋಗಿರುತ್ತೇವೆ ಎಂದು, ನಂತರ ಆರೋಪಿತರಾದ ನಿಮ್ಮನ್ನು ಮತ್ತು ಜಪ್ತಾದ ವಸ್ತುಗಳನ್ನು ವಲಯ ಕಚೇರಿಗೆ ತೆಗೆದುಕೊಂಡು ಹೋಗಿ, ಮುಂದಿನ ಕ್ರಮ ಕೈಗೊಂಡಿರುತ್ತಾರೆ ಎಂದು, ಸಾಕ್ಷಿಯವರು ನಿಪಿ-2 ಫೋಟೋವನ್ನು ನೋಡಿ ಗುರುತಿಸಿದ್ದು, ಮತ್ತು ನ್ಯಾಯಾಲಯದಲ್ಲಿ ಆರೋಪಿತರಾದ ನಿಮ್ಮನ್ನು ನೋಡಿ ಗುರುತಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಆರೋಪಿಯ ಹೇಳಿಕೆ**

**ಪ್ರಃ 11:** ನಿಮಗೆ ಇನ್ನೇನಾದರೂ ಹೇಳುವುದು ಇದೆಯೇ?

**ಉತ್ತರಃ**

**ಪ್ರಃ 12:** ನಿಮ್ಮ ಪರವಾಗಿ ಯಾರನ್ನಾದರೂ ಸಾಕ್ಷಿ ವಿಚಾರಣೆ ಮಾಡುತ್ತೀರಾ?

**ಉತ್ತರಃ**

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿತರಿಗೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ, ಆರೋಪಿತರು ನೀಡಿರುವ ಉತ್ತರವನ್ನು ಯಥಾವತ್ತಾಗಿ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆ ಮತ್ತು ಅದು ಸರಿ ಇರುತ್ತದೆ ಅಂತಾ ಈ ಮೂಲಕ ದೃಡಿಕರಿಸಿರುತ್ತೇನೆ.)

**ಸ್ಥಳಃ ದಾಂಡೇಲಿ** **ಸಹಿ ಇದೆ/-**

**ದಿನಾಂಕಃ 31.01.2026** **ಪ್ರ.ದ.ದಂ.ನ್ಯಾಯಾಲಯ, ದಾಂಡೇಲಿ.**